**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ.ಸಿ. ಸಂಖ್ಯೆ : 584/2024**

**ಚಾ.ಸಾಃ 17, ಫ್ರಾ.ಸಾಃ 05**

| | |
|---|---|
| ಸಾಕ್ಷಿದಾರನ ಹೆಸರು | ಭರತಕುಮಾರ ವಿ. |
| ತಂದೆಯ ಹೆಸರು | ವೆಂಕಟರಾಯ ನಾಯಕ |
| ವಯಸ್ಸು | 34 ವರ್ಷಗಳು |
| ಉದ್ಯೋಗ | ಪಿ ಎಸ್ ಐ, ಕುಮಟಾ ಕರಾವಳಿ ಕಾವಲು ಪಡೆ ಪೋಲೀಸ್ ಠಾಣೆ |
| ವಾಸ್ತವ್ಯ | ಕುಮಟಾ |

**ಸಾಕ್ಷಿಯನ್ನು ದಿನಾಂಕಃ 02-05-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಾನು ಜೂನ್ 2023 ರಿಂದ ಡಿಸೆಂಬರ್ 2025 ರ ವರೆಗೆ ಮಂಕಿ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 19-09-2024 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಮಧ್ಯಾಹ್ನ 12-00 ಗಂಟೆಗೆ ಪಿರ್ಯಾದುದಾರರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಪಡೆದುಕೊಂಡು ಠಾಣಾ ಮೊಕದ್ದಮೆ ನಂ.97/2024 ರಂತೆ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ದೂರನ್ನು ನೋಡುತ್ತಿದ್ದು ಅದನ್ನು ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ-8 ಎಂದು, ಸಾಕ್ಷಿ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

ಅದೇ ದಿನ ಮಧ್ಯಾಹ್ನ 01-30 ರಿಂದ 2-30 ರ ಸಮಯದಲ್ಲಿ ಘಟನಾ ಸ್ಥಳಕ್ಕೆ ಭೇಟಿ ನೀಡಿ ನೊಟೀಸನ್ನು ನೀಡಿ ಪಂಚರವನ್ನು ಬರಮಾಡಿಕೊಂಡು ಪಿರ್ಯಾದಿ ತೋರಿಸಿದ ಸ್ಥಳದಲ್ಲಿ ಪಂಚರ ಸಮಕ್ಷಮ ಸ್ಥಳ ಪಂಚನಾಮೆ ತಯಾರಿಸಿ ಫೋಟೋ ತೆಗಸಿರುತ್ತೇನೆ. ಸ್ಥಳ ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-2 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಫೋಟೋಗಳನ್ನು ನೋಡುತ್ತಿದ್ದು ನಿಪಿ-3 ರಿಂದ 6 ಎಂದು ಗುರುತಿಸಲಾಗಿದೆ.

ಅದೇ ದಿನ ಚಾಸಾ-8 ರಿಂದ 11 ರವರ ಹೇಳಿಕೆಯನ್ನು ಪಡೆದಿರುತ್ತೇನೆ.

ಅದೇ ದಿನ ಆರೋಪಿತರ ಪತ್ತೆಗಾಗಿ ಸಿಬ್ಬಂದಿಯವರನ್ನು ನೇಮಿಸಿದ್ದು ಅದೇ ದಿನ ರಾತ್ರಿ 10-00 ರ ಸಮಯಕ್ಕೆ ಸದರಿ ಸಿಬ್ಬಂದಿಯವರು 2 ಜನ ಆರೋಪಿತರನ್ನು ಹಾಜರುಪಡಿಸಿದ್ದು, ಅವರನ್ನು ವಿಚಾರಣೆಗೆ ಒಳಪಡಿಸಿದ್ದು, ಅವರು ಕೃತ್ಯದಲ್ಲಿ ಭಾಗಿಯಾಗಿರುವುದನ್ನು ಒಪ್ಪಿಕೊಂಡಿದ್ದರಿಂದ ಅವರನ್ನು ಬಂಧಿಸಿ ಸ್ವ ಖುಷಿ ಹೇಳಿಕೆಯನ್ನು ಪಡೆದಿರುತ್ತೇನೆ.

ದಿಃ 20-09-2024 ರಂದು ಆರೋಪಿತರ ಸ್ವಾಧೀನದಲ್ಲಿರುವ ವಸ್ತುಗಳನ್ನು ಅಮಾನತ್ತುಪಡಿಸಲು ಮತ್ತು ಘಟನಾ ಸ್ಥಳದ ಪಂಚನಾಮೆಗಾಗಿ ಸಹಕರಿಸಲು ಪಂಚರಿಗೆ ನೋಟಿಸ ನೀಡಿ ಅವರಿಗೆ ಮಾಹಿತಿ ನೀಡಿ ಅದರಂತೆ ಅವರು ಪಂಚನಾಮೆಗೆ ಬರಲು ಒಪ್ಪಿಕೊಂಡಿದ್ದು, ಅದೇ ದಿನ ಸಿಬ್ಬಂದಿಯವರು ಹಾಜರುಪಡಿಸಿದ ಆರೋಪಿತರ ಕಾರನ್ನು ಪರೀಶೀಲಿಸಿದಾಗ ಸದರಿ ಕಾರು ಸ್ವಿಫ್ಟ ಕಾರು ಆಗಿದ್ದು, ಅದರಲ್ಲಿ ಕೆಂಪು ಬಣ್ಣದ 2 ಎಕ್ಸೈಡ್ ಬ್ಯಾಟರಿಗಳು ಮತ್ತು ಸುಮಾರು 5 ಅಡಿ ಉದ್ದದ ಒಂದು ಕಬ್ಬಿಣದ ಹಾರೆ ಇದ್ದು, ಅದನ್ನು ಆರೋಪಿತರು ತೋರಿಸಿದ್ದು, ಅವುಗಳನ್ನು ಪಂಚನಾಮೆಯಡಿಯಲ್ಲಿ ಅಮಾನತ್ತುಪಡಿಸಿಕೊಂಡು ಫೋಟೋ ತೆಗೆಸಿರುತ್ತೇನೆ. ಸದರಿ ಪಂಚನಾಮೆಯನ್ನು ಮುಂದುವರೆಸಿದ್ದು ಆರೋಪಿತರು ಕೃತ್ಯದ ಸ್ಥಳವನ್ನು ಆರೋಪಿತರು ತೋರಿಸುವುದಾಗಿ ಹೇಳಿದ್ದು, ಸ್ಥಳಕ್ಕೆ ಹೋದಾಗ ಆರೋಪಿತರು ಕೃತ್ಯ ನಡೆದ ಸ್ಥಳ, ಅಂಗಡಿ ಮತ್ತು ಬ್ಯಾಟರಿ ತೆಗೆದ ಲಾರಿಯನ್ನು ತೋರಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಮುಂದುವರೆಸಿ ಸ್ಥಳದಲ್ಲಿ ಫೋಟೋ ತೆಗೆಸಿರುತ್ತೇನೆ. ಅದರಂತೆ ಮಧ್ಯಾಹ್ನ 12-00 ಗಂಟೆಗೆ ಪಂಚನಾಮೆಯನ್ನು ಫ್ರಾರಂಭಿಸಿ 2-00 ಗಂಟೆಗೆ ಪಂಚನಾಮೆಯನ್ನು ಮುಗಿಸಿರುತ್ತೇನೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು ನಿಪಿ-7 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-7(ಬಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಫೋಟೋಗಳನ್ನು ನೋಡುತ್ತಿದ್ದು, ನಿಪಿ-4 ರಿಂದ 6 ಎಂದು ಗುರುತಿಸಲಾಯಿತು. ಅಮಾನತ್ತುಪಡಿಸಿಕೊಂಡ ರಾಡು ಮತ್ತು ಬ್ಯಾಟರಿಗಳನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ರಾಡನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ಮು.ಮಾ. 1 ಎಂದು ಗುರುತಿಸಲಾಗಿದೆ.

ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ಠಾಣಾ ಪಿ ಎಫ ನಲ್ಲಿ ನಮೂದಿಸಿರುತ್ತೇನೆ.

ಅದೇ ದಿನ ಚಾ.ಸಾ. 8 ರಿಂದ 11 ರವರ ಮರುಹೇಳಿಕೆಯನ್ನು ಪಡೆದಿರುತ್ತೇನೆ.

ದಿಃ 07-10-2024 ರಂದು ಚಾ.ಸಾ. 13 ರವರಿಗೆ ಆರೋಪಿತರು ಕೃತ್ಯಕ್ಕೆ ಬಳಸಿದ ಕಾರಿನ ಬಗ್ಗೆ ಮಾಹಿತಿ ಪೂರೈಸುವಂತೆ ಪತ್ರ ಬರೆದಿರುತ್ತೇನೆ. ಅದರಂತೆ ದಿಃ 04-11-2024 ರಂದು ಸದರಿ ಮಾಹಿತಿಯನ್ನು ಪಡೆದಿರುತ್ತೇನೆ.

ದಿಃ 10-10-2024 ರಂದು ಚಾಸಾ. 12 ರವರ ಹೇಳಿಕೆಯನ್ನು ಪಡೆದಿರುತ್ತೇನೆ.

ದಿಃ 17-10-2024 ರಂದು ಅಮಾನತ್ತುಪಡಿಸಿಕೊಂಡ ಕಾರನ್ನು ಮಾಲೀಕರಿಗೆ ಬಿಟ್ಟುಕೊಡುವಂತೆ ಆದಂತಹ ಮಧ್ಯಂತರ ಆದೇಶದಂತೆ ಸದರಿ ಕಾರನ್ನು ಮಾಲೀಕರ ಸ್ವಾಧೀನಕ್ಕೆ ಫೋಟೋ ತೆಗೆದು ನೀಡಿರುತ್ತೇನೆ.

ಅದೇ ದಿನ ಚಾ.ಸಾ. 15 ರವರಿಂದ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 63(4) ಪ್ರಮಾಣ ಪತ್ರ ಪಡೆದಿರುತ್ತೇನೆ. ಈಗ ಅದನ್ನು ನೋಡುತ್ತಿದ್ದು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.

ದಿಃ 20-10-2024 ರಂದು ಮಾನ್ಯ ನ್ಯಾಯಾಲಯದ ಆದೇಶದಂತೆ ವಶಪಡಿಸಿಕೊಂಡಿರುವ ಬ್ಯಾಟರಿಗಳನ್ನು ಮಾಲೀಕರ ಸ್ವಾಧೀನಕ್ಕೆ ನೀಡಿರುತ್ತೇನೆ.

ದಿಃ 13-11-2024 ರಂದು ತನಿಖೆ ಪೂರೈಸಿ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರು ಗೈರು ಹಾಜರಿ. ಗುರುತಿನ ಬಗ್ಗೆ ತಕರಾರು ಇಲ್ಲ.

**ಪಾಟೀ ಸವಾಲುಃ 2 ನೇ ಆರೋಪಿ ಪರ ವಕೀಲರಾದ ಶ್ರೀ ವಿ. ಆರ್. ನಾಯ್ಕರಿಂದಃ**

ಆರೋಪಿತರು ಬೈಂದೂರಿನಲ್ಲಿ ಸಿಕ್ಕಿರುತ್ತಾರೆ. ಆರೋಪಿತರು ಸಿಕ್ಕ ವಿಚಾರವನ್ನು ಬೈಂದೂರು ಠಾಣೆಗೆ ಮಾಹಿತಿ ನೀಡಲಾಗಿದೆಯೇ ಎಂದರೆ ಬೈಂದೂರು ಠಾಣೆಯ ಪೊಲೀಸರ ಸಹಾಯದಿಂದಲೇ ಆರೋಪಿತರನ್ನು ಹಿಡಿದಿದ್ದು, ಆರೋಪಿತರನ್ನು ಹಿಡಿದ ಬಗ್ಗೆ ಬೈಂದೂರು ಠಾಣೆಯ ದಿನಚರಿಯಲ್ಲಿ ನಮೂದು ಮಾಡಲಾಗಿದೆಯೋ ಇಲ್ಲವೋ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಬೈದೂರು ಠಾಣೆಯ ಪೊಲೀಸರು ಆರೋಪಿತರನ್ನು ಹಿಡಿದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಬೈಂದೂರಿನಿಂದ ಬರುವಾಗ ಶಿರೂರು ಟೋಲನ್ನು ದಾಟಿ ಬರಬೇಕಾಗುತ್ತದೆ ಎಂದರೆ ಸರಿ. ಆರೋಪಿತರನ್ನು ದಿಃ 19-09-2024 ರ ರಾತ್ರಿ 10-00 ಗಂಟೆ ಸಮಯಕ್ಕೆ ಠಾಣೆಗೆ ಕರೆದುಕೊಂಡು ಬರಲಾಗಿರುತ್ತದೆ. ರಾತ್ರಿ 8-00 ಗಂಟೆ ಸಮಯಕ್ಕೆ ಸದರಿ ಆರೋಪಿತರ ಕಾರು ಶಿರೂರನ್ನು ದಾಟಿರುತ್ತದೆ ಎಂದರೆ ದಾಟಿರಬಹುದು ಎನ್ನುತ್ತಾರೆ. ಆರೋಪಿತರನ್ನು ಠಾಣೆಯಲ್ಲಿ ಹಾಜರುಪಡಿಸಿದಾಗ ಈ ಬಗ್ಗೆ ದಿನಚರಿಯಲ್ಲಿ ಬರೆಯಲಾಗಿದೆ. ರಾತ್ರಿ ಸಮಯದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ. ಆರೋಪಿತರನ್ನು ಹಾಜರುಪಡಿಸಿದಾಗಲೇ ಅವರ ಸ್ವ ಖುಷಿ ಹೇಳಿಕೆ ಪಡೆಯಲಾಗಿದೆ. ಆರೋಪಿತರು ಹಿಂದಿ ಭಾಷೆಯಲ್ಲಿ ಮಾತನಾಡಿರುತ್ತಾರೆ. ನಾನು ಹೇಳಿರುವಂತೆ ಆರೋಪಿತರನ್ನು ಬೈಂದೂರಿನಲ್ಲಿ ಹಿಡಿದಿರುವುದಿಲ್ಲ ಮತ್ತು ಕಾರಿನಲ್ಲಿ ಕರೆದುಕೊಂಡು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಕಾರನ್ನು ಅಮಾನತ್ತುಪಡಿಸಿಕೊಳ್ಳುವ ಮೊದಲೇ ಘಟನಾ ಸ್ಥಳಕ್ಕೆ ಪಂಚನಾಮೆಗಾಗಿ ಹೋಗಿದ್ದೆವು. ಪಂಚರಲ್ಲಿ ಒಬ್ಬರಾದ ಚಾ.ಸಾ. 4 ರವರು ಫಿರ್ಯಾದಿ ಅಂಗಡಿಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಅದು ನನಗೆ ಗೊತ್ತಿಲ್ಲ. ಅಂಗಡಿಯಲ್ಲಿ ಸಿ ಸಿ ಕ್ಯಾಮರಾ ಪೂಟೇಜನ್ನು ಪರಿಶೀಲಿಸಿರುತ್ತೇನೆ. ಆದರೆ ಅದರಲ್ಲಿ ಏನೂ ಕಾಣಲಿಲ್ಲ. ಬೇರೆ ಸಿ ಸಿ ಕ್ಯಾಮರಾ ನೋಡಿದಾಗ ಕಾರು ಬಂದಿದ್ದು ಕಾಣಿಸುತ್ತಿತ್ತು. ಫಿರ್ಯಾದಿಯಲ್ಲಿ ಕಾರಿನ ಬಣ್ಣವನ್ನು ನಮೂದಿಸಿಲ್ಲ. ಬ್ಯಾಟರಿ ಕಳ್ಳತನ ಆಗಿದ್ದ ಲಾರಿ ನಾವು ಸ್ಥಳಕ್ಕೆ ಹೋದಾಗ ಅಲ್ಲೇ ಇತ್ತು. ನಾನು ಸದರಿ ಲಾರಿಯನ್ನು ಪಂಚನಾಮೆಯ ಕಾಲಕ್ಕೆ ಸ್ಥಳಕ್ಕೆ ತಂದಿಡಲು ಹೇಳಲಿಲ್ಲ. ಪಂಚನಾಮೆಯನ್ನು ಬರೆಯಲು ಪಂಚರೆ ಮಾಹಿತಿ ನೀಡಿರುತ್ತಾರೆ. ಅಂಗಡಿಯ ಶಟರ್ಸನ ಬಲ ಭಾಗದ ಲಾಕನ್ನು ಒಡೆದು ಮಧ್ಯದ ಭಾಗವನ್ನು ಕಬ್ಬಿಣದ ರಾಡ್ ಮೂಲಕ ಮೀಟಿ ತೆಗೆದು ಕಳ್ಳತನ ಮಾಡಲಾಗಿರುತ್ತದೆ. ಶಟರ್ಸ ಮುರಿದಿರುವುದು ನಿಪಿ-3 ರ ಫೋಟೋದಲ್ಲಿ ಕಾಣುವುದಿಲ್ಲ. ಶಟರ್ಸನ ಎರಡೂ ಕಡೆ ಇದ್ದ ಬೀಗ ಬೆಂಡಾಗಿದ್ದವು. ಪಂಚನಾಮೆಯ ಕಾಲಕ್ಕೆ ಬೆಂಡಾಗಿದ್ದ ಬೀಗಗಳನ್ನು ಜಪ್ತುಪಡಿಸಿಕೊಂಡಿಲ್ಲ. ನಿಪಿ-3 ರ ಫೊಟೋದಲ್ಲಿ ಬೀಗ ಬೆಂಡಾಗಿರುವುದು ಕಾಣುತ್ತಿಲ್ಲ ಎಂದರೆ ಅದರಲ್ಲಿ ಸರಿಯಾಗಿ ಕಾಣುತ್ತಿಲ್ಲ ಎನ್ನುತ್ತಾರೆ. ಸರಿಯಾಗಿ ಕಾಣುವಂತೆ ಫೋಟೋ ತೆಗೆಯಲು ನನಗೆ ತೊಂದರೆ

ಇರಲಿಲ್ಲ. ಆರೋಪಿತರು ಯಾವುದೇ ಸ್ಥಳವನ್ನು ತೋರಿಸಿಲ್ಲ ಮತ್ತು ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಕಾರನ್ನು ಸ್ಥಳಕ್ಕೆ ತೆಗೆದುಕೊಂಡು ಹೋಗಿರಲಿಲ್ಲ. ಠಾಣೆಯ ಹತ್ತಿರ ಅಮಾನತ್ತುಪಡಿಸಿಕೊಂಡಿರುತ್ತೇವೆ. ಬೈಂದೂರಿನಲ್ಲಿ ಕಾರನ್ನು ಹಿಡಿದಾಗ ಅದರಲ್ಲಿ ಬ್ಯಾಟರಿ ಇದ್ದ ಬಗ್ಗೆ ಫೋಟೋ ತೆಗೆದಿರಲಿಲ್ಲ. ಠಾಣೆಗೆ ಕಾರನ್ನು ತಂದ ಕೂಡಲೇ ಅದರಲ್ಲಿ ಬ್ಯಾಟರಿ ಇದ್ದ ಬಗ್ಗೆ ಫೋಟೋ ತೆಗೆದಿರಲಿಲ್ಲ. ಬ್ಯಾಟರಿ ಮತ್ತು ರಾಡ್ ಕಾರಿನಲ್ಲಿ ಇದ್ದ ಸ್ಥಿತಿಯಲ್ಲಿ ಫೊಟೋ ತೆಗೆದಿಲ್ಲ. ಬೈಂದೂರಿನಿಂದ ಯಾವುದೇ ಕಾರನ್ನು ತಂದಿರುವುದಿಲ್ಲ, ಭಟ್ಕಳದಿಂದ ಆರೋಪಿತರ ಮನೆಯಿಂದ ತರಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರ ಕಾರಿನಲ್ಲಿ ಯಾವುದೇ ಬ್ಯಾಟರಿ ಮತ್ತು ರಾಡ್ ಇರಲೇ ಇಲ್ಲ ಎಂದರೆ ಸರಿಯಲ್ಲ. ಬ್ಯಾಟರಿ ಮತ್ತು ರಾಡ್ ನ್ನು ಕಾರಿನ ಪಕ್ಕಕ್ಕೆ ಇಟ್ಟು ಫೋಟೋ ತೆಗೆಸಿರುತ್ತೇನೆ ಎಂದರೆ ಸರಿಯಲ್ಲ. ಕಳ್ಳತನ ಪ್ರಕರಣಗಳು ಜಾಸ್ತಿಯಾಗಿರುವುದರಿಂದ ವಿನಾಃ ಕಾರಣ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸರಿಯಾಗಿ ತನಿಖೆ ಮಾಡದೇ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**